ಮುಂದುವರೆದು, ಮರಳು ಕೊರತೆ ಇರುವ ನೆರೆ ಜಿಲ್ಲೆಗಳಿಗೆ ಮರಳು ಪೂರೈಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ CRZ ಪ್ರದೇಶದಲ್ಲಿ ತೆಗೆಯುವ ಮರಳನ್ನು ಕೊಡಗು ಜಿಲ್ಲೆಗೆ ಪೂರೈಸಲಾಗುತ್ತಿದೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ಈಗ ಏನು ಕೋರೆ ಕ್ರಷರ್ ನಡೆಯುತ್ತಿದೆ, procedure ಆಗುವವರೆಗೆ ನಡೆಯಲಿ. ಮರಳು ಸಾಗಾಟ ಜಿಲ್ಲೆಯಲ್ಲಿ ನಡೆಯುತ್ತಿದೆ, ಅದಕ್ಕೆ ತೊಂದರೆ ಮಾಡುವುದು ಬೇಡ. ನಮ್ಮಲ್ಲಿ ಇರುವುದೇ ಮೂರು ತಿಂಗಳು. ಯಾವುದೇ ರೀತಿಯಲ್ಲಿ ತೊಂದರೆ ಮಾಡದೇ transportation ಗೆ ಅವಕಾಶ ಕೊಡಿ,

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ನನಗೆ ಗೊತ್ತಿರುವ ವಿಚಾರ. ನಾವು ತಕ್ಷಣವೇ circular ಗಳನ್ನು ಕಳುಹಿಸಿ ನಿಯಮ 8(I) ಮತ್ತು (Q) ರಲ್ಲಿ ಕ್ರಮ ಸಲ್ಲಿಸಿದ್ದು, ಈ ಬಗ್ಗೆ ಇಂದು ಬೆಳಿಗ್ಗೆ ಚರ್ಚೆ ಮಾಡಿದ್ದೇನೆ. ನಾನು circular ಅನ್ನು ಕಳುಹಿಸಿ, ಯಾವುದೇ ರೀತಿಯಲ್ಲಿಯೂ ಕೂಡಾ existing crushers ಅಥವಾ Sand Mining license ಏನಿದೆ, ಅವುಗಳಿಗೆ ತೊಂದರೆಯಾಗದ ರೀತಿಯಲ್ಲಿ circular ಕಳುಹಿಸುತ್ತೇನೆ.

ಅಧ್ಯಕ್ಷರು: ಈಗ ಚಲುವರಾಯಸ್ವಾಮಿಯವರು.

8. ವಿಷಯ: ಮಂಡ್ಯ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿ ಪಡಿಸುವುದು ಮತ್ತು ತೊಣ್ಣೂರು ಮತ್ತು ಮೇಲುಕೋಟೆಗಳನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸುವ ಬಗ್ಗೆ.

ಶ್ರೀ ಚಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿನ ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿ ಪಡಿಸುವ ಹಾಗೂ ತೊಣ್ಣೂರು ಮತ್ತು ಮೇಲುಕೋಟೆಗಳನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸುವ ಬಗ್ಗೆ ಮಾನ್ಯ ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನಾ ಸಚಿವರು) (ಮಾನ್ಯ ಉನ್ನತ ಶಿಕ್ಷಣ

ಹಾಗೂ ಪ್ರವಾಸೋದ್ಯಮ ಇಲಾಖಾ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಇಲಾಖೆಯಿಂದ ಒಟ್ಟು 14 ಪ್ರವಾಸಿ ತಾಣಗಳನ್ನು ಗುರುತಿಸಲಾಗಿರುತ್ತದೆ. ಪ್ರವಾಸಿ ತಾಣಗಳ ಅಭಿವೃದ್ಧಿಗೆ ₹ 36.80 ಕೋಟಿಗಳ ಅಂದಾಜು ವೆಚ್ಚದಲ್ಲಿ 28 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ ಈವರೆಗೆ ₹ 19.63 ಕೋಟಿಗಳನ್ನು ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ಒಟ್ಟು 28 ಕಾಮಗಾರಿಗಳ ಪೈಕಿ ₹ 10.16 ಕೋಟಿಗಳ ಅಂದಾಜು ವೆಚ್ಚದ 07 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 05 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ, ಈ ಕಾಮಗಾರಿಗಳಿಗಾಗಿ ₹ 6.84 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 7 ಕಾಮಗಾರಿಗಳನ್ನು ನಿವೇಶನದ ಕೊರತೆಯಿಂದ ಸಕಾಲದಲ್ಲಿ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಆದರೆ ಇತ್ತೀಚೆಗೆ ನಿವೇಶನಗಳನ್ನು ಗುರುತಿಸಿ ಇಲಾಖೆ ವಶಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ನಿವೇಶನವನ್ನು ಪಡೆದ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು. 01 ಕಾಮಗಾರಿಗೆ ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಿರುವ ಕಾರಣ ಪರಿಶೀಲನೆಯಲ್ಲಿ ಇರುತ್ತದೆ.

2013–14ನೇ ಸಾಲಿನಲ್ಲಿ ₹ 5.54 ಕೋಟಿಗಳ ಅಂದಾಜು ವೆಚ್ಚದ 8 ನೂತನ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ.

ತೊಣ್ಣೂರು ಮತ್ತು ಮೇಲುಕೋಟೆಗಳನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸುವ ವಿಷಯವು ಆಯುಕ್ತರು, ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಯುನೆಸ್ಕೋ ಸಂಸ್ಥೆ ನಿಗದಿಪಡಿಸಿರುವ ಷರತ್ತು ಮತ್ತು ನಿರ್ದೇಶನಗಳನ್ನು ಅನುಸರಿಸಿ ವಿಶ್ವಪರಂಪರಾ ತಾಣದ ಸ್ಥಾನಮಾನ ಪಡೆಯುವ ಪ್ರಕ್ರಿಯೆಯನ್ನು ಪರಂಪರೆ ಆಯುಕ್ತರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಪ್ರಾರಂಭಿಸಬೇಕಾಗಿರುತ್ತದೆ.

ಶ್ರೀ ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಪ್ರವಾಸೋದ್ಯಮ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ವಾಸ್ತವವಾಗಿ ನಮ್ಮ ಜಿಲ್ಲೆಯಲ್ಲಿ

ಪ್ರವಾಸೋದ್ಯಮ ಇಲಾಖೆಯಲ್ಲಿ ತೆಗೆದುಕೊಂಡಂತಹ ಕಾಮಗಾರಿಗಳು ಯಾವುದೂ ನಡೆಯುತ್ತಿಲ್ಲ. ಎಲ್ಲವೂ ಸಹ ಸ್ಥಗಿತವಾಗಿದೆ. ದಯಮಾಡಿ ತಾವು ಖುದ್ದಾಗಿ ನಿರ್ದೇಶನ ಕೊಟ್ಟು ಎಲ್ಲಾ ಕಾಮಗಾರಿಗಳನ್ನು ತಕ್ಷಣ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕು. ಕೊಪ್ಪದಲ್ಲಿ 2010 ರಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಕೇವಲ electrification ಆಗಿಲ್ಲವೆಂಬ ಕಾರಣ ಉದ್ಘಾಟನೆಯಾಗದೆ ನಿಂತಿದೆ. ಈ ರೀತಿಯಾಗಿ ಅಪೂರ್ಣಗೊಂಡಿರುವ ಸಣ್ಣ ಪುಟ್ಟ ಕೆಲಸಗಳನ್ನು ಮುಗಿಸಬೇಕು. ಮೇಲುಕೋಟೆ ಮತ್ತು ತೊಣ್ಣೂರು ಗಳನ್ನು ವಿಶ್ವ ಪರಂಪರೆಗೆ ಸೇರಿಸಲು ಸರ್ಕಾರ ಮುತುವರ್ಜಿ ವಹಿಸಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆಯನ್ನು ಸ್ವೀಕಾರ ಮಾಡಿದೆ. ಸರ್ಕಾರ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಹೆಚ್.ಎಸ್. ಶಿವಶಂಕರ್, ಶಾರದಾ ಪೂರ್ಯ ನಾಯಕ್ ರವರು.

9. ವಿಷಯ : ಶಿವಮೊಗ್ಗ ಜಿಲ್ಲೆ, ಭದ್ರಾ ಜಲಾಶಯದಿಂದ ತುಂಗಭದ್ರಾ ಡ್ಯಾಂಗೆ ನೀರು ಹರಿಸುವ ಸರ್ಕಾರದ ನಿರ್ಣಯದಿಂದ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀಮತಿ ಶಾರದಾ ಪೂರ್ ನಾಯಕ್ (ಶಿವಮೊಗ್ಗ ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಭದ್ರಾ ಜಲಾಶಯದಿಂದ ತುಂಗಭದ್ರಾ ಡ್ಯಾಂಗೆ ನೀರು ಹರಿಸುವ ಸರ್ಕಾರದ ನಿರ್ಣಯದಿಂದ ಉಂಟಾಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ದಿ: 23.11.2013ರಂದು ನಡೆದ 98ನೇ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ನಿರ್ಣಯದಂತೆ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಹಾಗೂ ಬಲದಂಡೆ ಕೆಳಮಟ್ಟದ ಕಾಲುವೆಗೆ ಸಮರ್ಪಕವಾಗಿ ನೀರು ನಿರ್ವಹಣೆಗೆ ತುಂಗಭದ್ರಾ ಜಲಾಶಯದಲ್ಲಿ ಸುಮಾರು 9 ಟಿಎಂಸಿ